ತಾರೀಖು 18ನೇ ಮೇ 1896, ಮೊಕ್ಕಾಂ ಮೈಸೂರ.

ನಂ. 10165—ಎಕ್ಸ್. 309, ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ ಎಕ್ಸೈಜ್ ಕಮ್ಮಿಷನರ ವ ಮೈಸೂರ ಎಜ್ಯುಕೇಷ- ಅಫಿಷಿಯೇಟಿಂಗ್ ಇನ್‌ಸ್ಪೆಕ್ಟರ್ ಜನರಲ್‌ರಾದ ಮೆಸ್ಸರ್ ಪಿ. ಯಜ್. ಪೂರ್ಣಯ್ಯನವರಿಗೆ 1896ನೇ ಮೇ 13 ವ 14ನೇ ಮುಕ್ತಂಗಳಲ್ಲಿ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಮೇ 1896, ಮೊಕ್ಕಾಂ ಬೆಂಗಳೂರ.

ನಂ. 10224—ರೆ. 4018, ದಾವಣಗೆರೆ ತಾಲ್ಲೂಕು ಅಮಲ್ದಾರ್ ಜಿ. ಆರ್. ಶ್ರೀನಿವಾಸಯ್ಯಂಗಾರ್ರಿಗೆ 1896ನೇ ಮಾರ್ಚ್ 16ನೇ ಮುಕ್ತಂ 8428ನೇ—ರೆ. 3272ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾವನ್ನು ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 10227—4021, ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ ಕೋಲಾರ ತಾಲ್ಲೂಕು ಅಮಲ್ದಾರ್ ಸಿ. ಕೇಷವಾದ್ರಿ ಅಯ್ಯಂಗಾರ್ರಿಗೆ 1896ನೇ ಮೇ 7ನೇ ಮುಕ್ತಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಬೆಂಗಳೂರು ತಾರೀಖು 23ನೇ ಮೇ 1896.

ನಂ. 10286.—ರೆ. 4047, ಮೈಸೂರ ಸರ್ವಿಸ್ ರೆಗ್ಯುಲೇಷಗಳ 173ನೇ ಆರ್ಟಿಕಲ್ ಅನುಸರಿಸಿ ಮೈಸೂರು ಮಿಸ್ಸಿಕ್ಕು ಪ್ರೊವೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಸಿ. ದೇವರಾಜ ಅರಸಿನವರಿಗೆ 1896ನೇ ಮೇ 4ನೇ ಮುಕ್ತಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಫ್ರೈಜ್‌ಡಾಕ್ಸ್ ಸಬ್ ಡಿವೀಜನಿಗೆ ನೇಮಕ ಅಸಿಸ್ಟೆಂಟ್ ಕಮ್ಮಿನರ್ ಮೆಸ್ಸರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ಯವರು ಸದರಿ ಮೆ॥ ಸಿ. ದೇವರಾಜ ಅರಸಿನವರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಿಸ್ಸಿಕ್ಕು ಪ್ರೊಬೇರಿಯ ಚಾರ್ಜಿನಲ್ಲಿ ರತಕ್ಕದ್ದು.

ಮೊಕ್ಕಾಂ ಬೆಂಗಳೂರು ತಾರೀಖು 26ನೇ ಮೇ 1896.

ನಂ. 10353.—ರೆ. 4085. ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ ಕುಣಿಗಲ್ ತಾಲ್ಲೂಕು ಅಮಲ್ದಾರ್ ವಿ. ಪಾರ್ಥಸಾರಥಿ ಅಯ್ಯಂಗಾರ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕಿನ ಸಿರಸ್ತೇದಾರ್ರು ತಮ್ಮ ಕೆಲಸಗಳೊಂದಿಗೆ ಸದರಿ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರಿ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 28ನೇ ಮೇ 1896, ಬೆಂಗಳೂರು.

ನಂ. 10370—ರೆ. 4091, ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ ಕೋಲಾರ ಮಿಸ್ಸಿಕ್ಕು ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರಾದ ಮೆಸ್ಸರ್ ಬಿ. ಜಿ. ಕೃಷ್ಣಯ್ಯಂಗಾರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರು ಸದರೀ ಮೆಸ್ಸರ್ ಬಿ. ಜಿ ಕೃಷ್ಣಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಮಿಸ್ಸಿಕ್ಕಿನ ಚಾರ್ಜಿನಲ್ಲಿರತಕ್ಕದ್ದು.

ಮೊಕ್ಕಾಂ ಬೆಂಗಳೂರು ತಾರೀಖು 29ನೇ ಮೇ 1896.

ನಂ. 10367.—ಫಾ. ಫೈ. 92—95, ಮೈಸೂರ ಸರ್ವಿಸ್ ರೆಗ್ಯುಲೇಷಗಳ 108ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಮಿಸ್ಸಿಕ್ಕು ಫಾರೆಸ್ಟುಗಳ ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆಸ್ಸರ್ ವೈ. ಸೀತಾರಾಮಯ್ಯನವರಿಗೆ 1896ನೇ ಜೂ॥ 2ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ತಿಂಗಳು ಮತ್ತು ಹದಿನಾರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಏಮೋಜೇಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿ ಲಿ ಟರಿ.

ಇಸ್ತಿಹಾರ್‌ನಾಮೆ.

ತಾರೀಖು 21ನೇ ಮೇ 1896.

ಎಡ್ತಿಮಾಡಲ್ಪಟ್ಟ ಸುಬೇದಾರ್ಯಮರಿ ಜಮಾದಾರ್ ವೀರಸಾದ್ದಿರ್ದಿಯವರಿಗೆ ಎದಲಾಗಿ ಲೋಕಲ್ ಸ್ಯಾನ್ಸ್ ರೆಜಿಮೆಂಟಿನಲ್ಲಿ ಇದರಡಿ ಕಂಡ ಎಡ್ತಿಯು 1896ನೇ ಏಪ್ರಿಲ್ 11ನೇ ಮುಕ್ತಂ ಲಾಗಾಯತು ಮಾಡಲ್ಪಟ್ಟಿರುತ್ತೆ.

ಮಹಮ್ಮದ್ ನೆಸರುದ್ದಿರ್ದಿಯವರು ದಫೇದಾರರೆಂದ ಸೂಪರ್ ನೂಮರರಿ ಜಮೇದಾರಿಗೆ.

ತಾರೀಖು 1ನೇ ಜೂ॥ 1896.

ಮೈಸೂರ ಪೈದಲ್ ಫಾಜಿನ 2ನೇ ರೆಜಿಮೆಂಟಿನಲ್ಲಿ ಇದರಡಿ ಕಂಡ ಎಡ್ತಿಗಳು 1896ನೇ ಏಪ್ರಿಲ್ ಗುರ್ರಿ ಲಾಗಾಯತು ಮಾಡಲ್ಪಟ್ಟಿರುತವೆ:—

ಮಹಮ್ಮದ್‌ಕಾಜುದ್ದಿರ್ದಿಯವರು 1ನೇ ಗ್ರೇಡ್ ಜಮಾದಾರಿಯಿಂದ 2ನೇ ಗ್ರೇಡ್ ಸುಬೇದಾರಿಗೆ; ಮತ್ತು ಫ್ರಾನ್ಸಿಸ್‌ಯವರು ಹವಾಲ್ದಾರ್ ಮೇಜರಿಂದ 2ನೇ ಗ್ರೇಡ್ ಜಮಾದಾರಿಗೆ.

ಹುಕುಂ ಏಮೋಜೇಬ್,
ಪಿ. ಯಜ್. ಮೆಕ್ಕಾಲ್ಯೆರ್, ಲೆ. ಕರ್ನಲ್,
ಮಿಲಿಟರಿ ಸೆಕ್ರೆಟರಿ.